# ಸರಿತಾ ಮಾಡಿದ್ದು ಸರೀನಾ?

ಸರಿತಾ ದೇವಿ ಮತ್ತು ಮೇರಿ ಕೋಮ್ ಒಟ್ಟೊಟ್ಟಿಗೇ ಬಾಕ್ಸಿಂಗ್ ಕಣದಲ್ಲಿ ಬೆಳೆದವರು. 'ಹೆಣ್ಣುಮಕ್ಕಳು ಬಾಕ್ಸಿಂಗ್ ಮಾಡುವುದಾ!?' ಎಂದು 90ರ ದಶಕದಲ್ಲಿ ಭಾರತೀಯರು ರಾಗ ಎಳೆಯುತ್ತಿದ್ದಾಗ, ಈ ಇಬ್ಬರೂ ಗಟ್ಟಿಗಿತ್ತಿಯರು ಏಷ್ಯನ್ ಗೇಮ್ಸ್‌ನಲ್ಲಿ 'ಬಾಕ್ಸಿಂಗ್ ಷೋ' ನಡೆಸಿ, ಮಹಿಳಾ ಬಾಕ್ಸಿಂಗ್‌ನ ಅಧಿಕೃತ ಮನ್ನಣೆಗೆ ಹೆಣಗಾಡಿದವರು. ಹಾಲಿವುಡ್ ನಟಿ ಪ್ರಿಯಾಂಕಾ ಚೋಪ್ರಾ, ಬೆಳ್ಳಿತೆರೆಯ ಮೇಲೆ ಮೇರಿ ಕೋಮ್‌ಗೆ ಜೀವ ಕೊಟ್ಟ ಬಳಿಕ ಮೇರಿ ಗೆಲುವಿನ ನಗೆ ಬೀರುತ್ತಿದ್ದಾರೆ. ಆದರೆ ಸರಿತಾ ದೇವಿ ಅಳುವ ದೃಶ್ಯಗಳೇ ಎಲ್ಲೆಡೆ ರಾರಾಜಿಸುತ್ತಿವೆ. ಇತ್ತೀಚಿನ ಇಂಚೆನ್ ಏಷ್ಯನ್ ಗೇಮ್ಸ್‌ನಲ್ಲಿ 60 ಕೆ.ಜಿ ಲೈಟ್‌ವೈಟ್ ಬಾಕ್ಸಿಂಗ್‌ನಲ್ಲಿ ಬೆಳ್ಳಿ ಪದಕ ಗೆಲ್ಲಬೇಕಾದ ಸರಿತಾದೇವಿ, ರೆಫರಿಯ ಪಕ್ಷಪಾತದಿಂದಾಗಿ ಕಂಚು ಗೆದ್ದರು. ಅದನ್ನು ಪ್ರತಿಭಟಿಸಿ, ಪದಕವನ್ನು ನಿರಾಕರಿಸಿ, ಅತ್ತು ಕರೆದು, (ಬೆಳ್ಳಿ ಪಡೆದ) ದ.ಕೊರಿಯಾದ ಪಾರ್ಕ್ ಜಿನಾ ಕೊರಳಿಗೇ ಕಂಚನ್ನೂ ಹಾಕಲು ಹೋದ ಸರಿತಾ ದೇವಿಗೆ ಈಗ ಅಂತರರಾಷ್ಟ್ರೀಯ ಬಾಕ್ಸಿಂಗ್ ಅಸೋಸಿಯೇಷನ್ (ಎಐಬಿಎ) ಅಮಾನತು ಶಿಕ್ಷೆ ವಿಧಿಸಿದೆ. ಮುಂದಿನ ತಿಂಗಳು ಜೆಜುನಲ್ಲಿ ನಡೆಯಲಿರುವ ಎಐಬಿಎ ಮಹಿಳಾ ವಿಶ್ವ ಬಾಕ್ಸಿಂಗ್‌ನಲ್ಲಿ ಸರಿತಾ ದೇವಿ ಪಾಲ್ಗೊಳ್ಳುವಂತಿಲ್ಲ.




ಇಂಚೆನ್‌ನಲ್ಲಿ ಅವತ್ತು ಸರಿತಾ ದೇವಿಗೇ ಬೆಳ್ಳಿ ಸಿಗಬೇಕಿತ್ತು ಅನ್ನೋದು ಭಾರತೀಯರ ವಾದ. ಪಾರ್ಕ್ ಜಿನಾ ವಿರುದ್ಧ ಆರಂಭದ ಎರಡು ಸುತ್ತುಗಳಲ್ಲಿ ಕೆಳಗೆ ಬಿದ್ದರೂ ಸಾಕಷ್ಟು ಪಂಚ್‌ಗಳನ್ನು ನೀಡಿದ್ದರು ಸರಿತಾ. ಮೂರನೆ ಸುತ್ತಿನಲ್ಲಿ ಎದುರಾಳಿಯನ್ನು ಕೆಳಕ್ಕುರುಳಿಸಿದ್ದರು. ನಾಲ್ಕನೇ ಸುತ್ತಿನಲ್ಲೂ ಮೇಲುಗೈ ಸಾಧಿಸಿದ್ದರು. ರೆಫರೀ ಮಾತ್ರ ಸರಿತಾ ದೇವಿ 0–3 ಅಂಕಗಳಿಂದ ಸೋತಿದ್ದಾರೆ ಎಂದರು. ಪ್ರತಿಭಟಿಸಿದ ಸರಿತಾ ಜಡ್ಜ್‌ಗಳಿಗೆ ಮೇಲ್ಮನವಿ ಸಲ್ಲಿಸಿದರು. ಅವರೂ ರೆಫರಿಯದ್ದೇ ಸರಿ ಎಂದರು. ಪದಕ ಪಡೆಯುವ ವೇದಿಕೆಯಲ್ಲೇ ಅಳು, ಅವಮಾನ ಮುಂತಾಗಿ ದೊಡ್ಡದೊಂದು ಡ್ರಾಮಾ ಸೃಷ್ಟಿಯಾಯಿತು.

ಕ್ರೀಡೆ ಯಾವುದೇ ಇರಲಿ, ಶಿಸ್ತು ಮುಖ್ಯ ಎನ್ನುವುದು ನಿಯಮ. ಸರಿತಾ ದೇವಿ ವೇದಿಕೆಗೆ ಬಂದರೂ ಪದಕ ಕೊರಳಿಗೆ ಹಾಕಿಕೊಳ್ಳಲು ನಿರಾಕರಿಸಿದರು. ಎದುರಾಳಿಯ ಕತ್ತಿಗೇ ಪದಕ ಹಾಕಲು ಯತ್ನಿಸಿದರು. ಸಂಘಟಕರು ಬಲವಂತವೆಂಬಂತೆ ಆಕೆಯ ಕೈಯಲ್ಲಿ ಪದಕ ಇಟ್ಟರು. ವೇದಿಕೆ ಇಳಿದು ಹೋಗಬೇಕಾದರೆ ಸರಿತಾ ದೇವಿ ಸಿಟ್ಟಿನೊಂದಿಗೆ ಕಣ್ಣೀರು ಸುರಿಸುತ್ತಾ ಪದಕವನ್ನು ಅಲ್ಲೇ ಬಿಟ್ಟು ತೆರಳಿದರು. ಸಂಘಟಕರು ಎಷ್ಟು ಕರೆದರೂ ಬರಲೇ ಇಲ್ಲ! ಎರಡು ದಿನ ಬಿಟ್ಟು, ಕ್ಷಮಾಪಣಾ ಪತ್ರ ಬರೆದುಕೊಟ್ಟ ಸರಿತಾದೇವಿ ಅಲ್ಲಿಗೆ ಪ್ರಕರಣ ಮುಗಿಯಿತು ಎಂದುಕೊಂಡಿದ್ದರು. ಆದರೆ ಈಗ ಸರಿತಾ ದೇವಿ ಮಾತ್ರವಲ್ಲ, ಭಾರತ ತಂಡದ ಮೂವರು ಕೋಚ್‌ಗಳು ಮತ್ತು ಚೆಫ್ ಡಿ ಮಿಷನ್ (ಪ್ರವಾಸದ ಮುಖ್ಯಸ್ಥ)ರನ್ನೂ ಅಮಾನತು ಮಾಡಲಾಗಿದೆ. 'ಇವರೆಲ್ಲ ಸೇರಿ ಪೂರ್ವಯೋಜಿತ ನಾಟಕ ಮಾಡಿದ್ದಾರೆ. ಉದ್ದೇಶಪೂರ್ವಕವಾಗಿ ಸಂಘಟಕರಿಗೆ, ಸಹಸ್ಪರ್ಧಿಗೆ ಅವಮಾನ ಮಾಡಿದ್ದಾರೆ' ಎನ್ನುವುದು ಘಟನೆಯ ಬಗ್ಗೆ ತಾಂತ್ರಿಕ ಸಮಿತಿ ಸದಸ್ಯರ ವರದಿ. ಈಗ ಅಂತಿನ ತೀರ್ಮಾನಿಗೆ ಇಡೀ ಪ್ರಕರಣ ಶಿಸ್ತು ಆಯೋಗದ ಮುಂದಿದೆ. ಆದರೆ ಆಯೋಗದ ತೀರ್ಪು ಬರುವುದಕ್ಕೆ ಮುಂಚೆಯೇ ಮಹಿಳಾ ವಿಶ್ವ ಬಾಕ್ಸಿಂಗ್ ಟೂರ್ನಿ ಬರುತ್ತಿದೆ. ಅದಕ್ಕೆಂದೇ ಭಾರತೀಯ ಒಲಿಂಪಿಕ್ ಅಸೋಸಿಯೇಶನ್ ಕೊನೆಯ ಕ್ಷಣದ ತೇಪೆ ಕೆಲಸದಲ್ಲಿ ತೊಡಗಿದೆ. ಅಮಾನತು ರದ್ದುಗೊಳಿಸಲು ಒತ್ತಡ ಹೇರುತ್ತಿದೆ.

ವಿದೇಶ ಪ್ರವಾಸ ಹೋಗುವಾಗ ಎಲ್ಲ ತಂಡಗಳಿಗೂ ಪ್ರತ್ಯೇಕ ಮ್ಯಾನೇಜರ್ ಇರುತ್ತಾರೆ. ಆದರೆ ದಕ್ಷಿಣ ಕೊರಿಯಾದ ಇಂಚೆನ್‌ಗೆ ಹೊರಟಾಗ ಬಾಕ್ಸಿಂಗ್ ತಂಡಕ್ಕೆ ಪ್ರತ್ಯೇಕ ಮ್ಯಾನೇಜರ್‌ರನ್ನು ಕಳಿಸಲು ಕೇಂದ್ರ ಸರ್ಕಾರ ಒಪ್ಪಲಿಲ್ಲ. ನಿಯೋಗ ದೊಡ್ಡದಾದರೆ ಖರ್ಚು ಹೆಚ್ಚು ಎನ್ನುವುದು ಕಾರಣವಂತೆ! ಪ್ರತ್ಯೇಕ ಮ್ಯಾನೇಜರ್ ಇದ್ದಿದ್ದರೆ ಪದಕ ಪ್ರದಾನದಲ್ಲಿ ಇಂತಹ ಡ್ರಾಮಾ ನಡೆಯದಂತೆ ತಡೆಯುತ್ತಿದ್ದರು ಎನ್ನುವುದೀಗ ಅಧಿಕಾರಿಗಳ ಸಬೂಬು.

ಸರಿತಾ ದೇವಿಗೆ ಬಾಲ್ಯದಿಂದಲೂ ಅಳು– ಅವಮಾನ ಹೊಸತೇನಲ್ಲ. ಇಂಫಾಲದ ಬಡ ಕುಟುಂಬದ ಎಂಟು ಮಕ್ಕಳಲ್ಲಿ ಆರನೆಯವಳಾಗಿ ಹುಟ್ಟಿದ ಹುಡುಗಿ. ಸರ್ಕಾರಿ ಹಾಸ್ಟೆಲ್‌ನಲ್ಲಿ ತರಬೇತಿ ಪಡೆಯುತ್ತಿದ್ದಾಗ ಹೊಟ್ಟೆ ತುಂಬಾ ಊಟವಿಲ್ಲದೆ ಉಪವಾಸ ಕುಳಿತರೂ, 'ಡಯಟ್ ಮಾಡುತ್ತಿದ್ದೇನೆ' ಎಂದು ಸಬೂಬು ಹೇಳುತ್ತಿದ್ದವಳು! ಅಪ್ಪ–ಅಮ್ಮನ ಜತೆ ಹೊಲದಲ್ಲಿ ಗಂಡಸರಂತೆಯೇ ದುಡಿದದ್ದರಿಂದ ದೇಹ ಗಟ್ಟಿಯಾಗಿತ್ತು. ಬಾಲ್ಯದಲ್ಲಿ ಕುಂಗ್‌ಫು ತರಬೇತಿ ಪಡೆದು ರೆಡ್‌ಬೆಲ್ಟ್ ಗಳಿಸಿದ್ದಳು. ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಮಣಿಪುರವನ್ನು ಪ್ರತಿನಿಧಿಸಬೇಕಿದ್ದ ಸರಿತಾ ಕೊನೇ ಕ್ಷಣದಲ್ಲಿ ತಪ್ಪು ತಿಳುವಳಿಕೆಯಿಂದಾಗಿ ಕ್ರೀಡಾಕೂಟದಿಂದ ಹೊರಬಿದ್ದಳು. ಬಳಿಕ ಕುಂಗ್‌ಫು ಕೋಚ್ ಇಬೊಟೊಂಬಿ ಈಕೆಯನ್ನು ಬಾಕ್ಸಿಂಗ್ ತರಬೇತಿಗೆ ಸೇರಿಸಿದ. 2001ರಲ್ಲಿ ರಾಷ್ಟ್ರೀಯ ಬಾಕ್ಸಿಂಗ್ ಕಣ ಪ್ರವೇಶಿಸಿದ ಈಕೆ, ಬ್ಯಾಂಕಾಕ್‌ನ ವಿಶ್ವ ಚಾಂಪಿಯನ್‌ನಲ್ಲಿ ಚಿನ್ನ ಗೆದ್ದಳು. ಆಮೇಲಿನದ್ದು ನಾಗಾಲೋಟ. ಮಣಿಪುರ ಸರ್ಕಾರ ಎಸ್‌ಐ ಹುದ್ದೆ ನೀಡಿತು. ರಾಷ್ಟ್ರೀಯ ಸ್ಪರ್ಧೆಗಳಲ್ಲಿ ಒಟ್ಟು 16 ಚಿನ್ನ. ಅಂತರರಾಷ್ಟ್ರೀಯ ಮಟ್ಟದಲ್ಲಿ 4 ಚಿನ್ನದ ಸಹಿತ 16 ಪದಕ. 2009ರಲ್ಲಿ ಕೇಂದ್ರ ಸರ್ಕಾರ ಅರ್ಜುನ ಪ್ರಶಸ್ತಿ ನೀಡಿತು. 2010ರಲ್ಲಿ ಡಿಎಸ್‌ಪಿ ಹುದ್ದೆಗೆ ಪ್ರಮೋಶನ್ ಬಂತು. ಬೆನ್ನಲ್ಲೇ ಭಾರತ ಫುಟ್ಬಾಲ್ ತಂಡದ ಆಟಗಾರ ಜೊಂಗ್ಬಾಮ್ ತೊಯ್ಬಾಸಿಂಗ್ ಜತೆಗೆ ಮದುವೆಯೂ ಆಯಿತು.

10 ತಿಂಗಳ ಮಗುವನ್ನು ಬಿಟ್ಟು ಐದು ತಿಂಗಳ ಕಾಲ ತರಬೇತಿಗೆ ತೆರಳಿದ್ದ ಸರಿತಾದೇವಿ, ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದು ಮರಳಿ ಬಂದಾಗ ಮಗುವಿಗೆ ಅಮ್ಮನ ಗುರುತೇ ಸಿಗಲಿಲ್ಲವಂತೆ! ಅಮ್ಮಂದಿರು ಬಾಕ್ಸಿಂಗ್ ಪಟುಗಳಾಗಿ ಮೆರೆಯುವ ಹಿಂದೆ ಇಂತಹ ನೂರೆಂಟು ನೋವಿನ, ತ್ಯಾಗದ ಕಥೆಗಳಿವೆ. 29ರ ಹರೆಯದ ಸರಿತಾದೇವಿ ಇಂಚೆನ್‌ನಲ್ಲಿ ಸಿಟ್ಟಿಗೆದ್ದದ್ದು ಸಹಜವೇ ಇರಬಹುದು. ಆದರೆ ಶಿಸ್ತು ಉಲ್ಲಂಘಿಸಿದ್ದು ಖಂಡಿತಾ ತಪ್ಪು. ಅದಕ್ಕಾಗಿ ಕ್ಷಮೆ ಕೇಳಿದ್ದಾಳೆ. 2016ರಲ್ಲಿ ರಿಯೋದಲ್ಲಿ ನಡೆಯಲಿರುವ ಒಲಿಂಪಿಕ್ಸ್ ಚಿನ್ನದ ಮೇಲೆ ಕಣ್ಣಿಟ್ಟಿರುವ ಆಕೆಗೆ, ಕ್ಷಮಾದಾನ ನೀಡುವ ದೊಡ್ಡ ಮನಸ್ಸು ಬಾಕ್ಸಿಂಗ್ ಫೆಡರೇಷನ್‌ಗೆ ಬರಲಿ. ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65